**<u>ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 748/2022**

| | | | |
|---|---|---|---|
| **ಹೆಸರು** | : | **ಡಾ. ಮಜರ ಹುಸೇನ** | ಚಾ.ಸಾ.11 |
| **ತಂದೆಯ ಹೆಸರು** | : | **ಗುಲಾಮ ಹುಸೇನ** | ಪ್ರಾ.ಸಾ. 9 |
| **ವಯಸ್ಸು** | : | **52 ವರ್ಷ** | ದಿನಾಂಕಃ 20-09-2025 |
| **ಉದ್ಯೋಗ** | : | **ವೈದ್ಯಾಧಿಕಾರಿ** | |
| **ವಾಸಸ್ಥಳ** | : | **ಗುಲಬರ್ಗಾ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

2020 ರಿಂದ 2023 ರವರೆಗೆ ಸರಕಾರಿ ಆಸ್ಪತ್ರೆ ಚಿಂಚೋಳಿಯಲ್ಲಿ ವೈದ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 14-08-2021 ರಂದು ಚಾಸಾ-1, 6, 7, 8, 9 ಮತ್ತು ಚಾಸಾ-10 ರವರು ನಮ್ಮ ಆಸ್ಪತ್ರೆಗೆ ತಾವು ಖುದ್ದು ನೇಲದ ಮೇಲೆ ಬಿದ್ದಿರುವ ಹಿನ್ನಲೆಯಲ್ಲಿ ಬಂದಿದ್ದು ಅವರಿಗೆ ತಪಾಸಣೆ ಮಾಡಿ ನೋಡಿದಾಗ ಚಾಸಾ-1ರವರ ಹೊಟ್ಟೆಗೆ ನೋವು ಇರುವುದು ಕಂಡು ಬಂದಿರುತ್ತದೆ. ಚಾಸಾ-6ರವರ ಎಡಭಾಗದ ತಲೆಗೆ ರಕ್ತಗಾಯವಾಗಿ ಮೂಳೆ ಮುರಿದಿರುವುದು ಕಂಡು ಬಂದಿರುತ್ತದೆ. ಚಾಸಾ-8ರವರ ಮೊಳ ಕೈ ಹಾಗೂ ಬೆರಳುಗಳಿಗೆ ರಕ್ತಗಾಯವಾಗಿ ಮೂಳೆ ಮುರಿದಿರುವುದು ಕಂಡು ಬಂದಿರುತ್ತದೆ. ಚಾಸಾ-9ರವರ ಬಲಭಾಗದ ಕಾಲಿಗೆ ಗಾಯವಾಗಿರುವುದು ಕಂಡು ಬಂದಿರುತ್ತದೆ ಹಾಗೂ ಚಾಸಾ-10 ರವರ ತಲೆಗೆ ರಕ್ತಗಾಯವಾಗಿ ಮೂಳೆ ಮುರಿದಿರುವುದು ಕಂಡು ಬಂದಿರುತ್ತದೆ. ಈಗ ನೋಡುತ್ತಿರುವ ನಿಪಿ-8 ರಿಂದ 13ರ ಗಾಯದ ಪ್ರಮಾಣ ಪತ್ರಗಳನ್ನು ನಾನು ನೀಡಿದ್ದೇನೆ. ಸದರಿ ಗಾಯ ಪ್ರಮಾಣ ಪತ್ರಗಳಲ್ಲಿರುವ ನನ್ನ ಸಹಿಗಳನ್ನು ನಿಪಿ-8(ಎ) ದಿಂದ ನಿಪಿ-13(ಎ) ಎಂದು ಗುರುತಿಸಲಾಯಿತು. ಮೇಲೆ ಹೇಳಿರುವ ಗಾಯಗಳು ಒಬ್ಬ ವ್ಯಕ್ತಿ ತಾನಾಗಿ ನೇಲದ ಮೇಲೆ ಬಿದ್ದಾಗ ಆಗಬಹುದು.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ SBK ವಕೀಲರಿಂದಃ-</u>**

ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಮೇಲಿಂದ ಬಿದ್ದಾಗ ನಿಪಿ-8 ರಿಂದ 13ರಲ್ಲಿರುವ ಗಾಯಗಳು ಆಗಬಹುದು ಎಂದರೆ ಸರಿ. ಪೋಲಿಸರ ಮಾತು ಕೇಳಿ ಸುಳ್ಳು ಗಾಯದ ಪ್ರಮಾಣ ಪತ್ರಗಳನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**